ದಿನಾಂಕ 05-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಪಾಟೀಸವಾಲುಃ ವಾದಿಯ ಪರ ಶ್ರೀ ಡಿ.ಎಸ್. ವಕೀಲರಿಂದ**

8) ವಾದಿಗೆ ನಾನು ಕೊನೆಯ ಬಾರಿ ಯಾವಾಗ ಹಣ ಪಾವತಿಸಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ಈ ಕಟ್ಟಡದ ಬಾಬ್ತು ವಾದಿಗೆ ಬಿಟ್ಟು ಬೇರೆ ಯಾರಿಗೂ ನಾನು ಸೆಲ್ಫ್ ಚೆಕ್ ಮೂಲಕ ಹಣ ಪಾವತಿಸಿಲ್ಲ. ವಾದಿಗೆ ಹಣವನ್ನು ನಾನು ಸೆಲ್ವ್ ಚೆಕ್ ಮೂಲಕ ಡ್ರಾ ಮಾಡಿಕೊಟ್ಟಿದ್ದೇನೆ. ನಾನು ವಾದಿಗೆ ಒಟ್ಟು 32,50,000.00 ಹಣವನ್ನು ಕೊಟ್ಟಿದ್ದೇನೆ. ಇಷ್ಟು ಹಣಕ್ಕಾಗಿ ಬ್ಯಾಂಕಿನ ದಾಖಲೆ ಮತ್ತು ಬೇರೆಯವರಿಂದ ಪಡೆದ ದಾಖಲೆಗಳು ಇವೆ. ನಾನು ಧಾರವಾಡದ ನಾಗಭೂಷಣ ಎನ್ನುವವರಿಂದ 5 ಲಕ್ಷ ರೂಪಾಯಿ ಹಣವನ್ನು ಪಡೆದು, ವಾದಿಗೆ ಕೊಟ್ಟಿದ್ದೆ. ಆ ಹಣವನ್ನು 3 ಕಂತುಗಳಲ್ಲಿ ಪಡೆದಿದ್ದೆ. ಅವರು ನನಗೆ ಹಣವನ್ನು ನಗದಾಗಿಯೇ ಕೊಟ್ಟಿದ್ದರು. ನಾನು ಹಳೆಯ ಮನೆಯನ್ನು ಮಾರಿಯೂ ಸಹ ವಾದಿಗೆ ಹಣವನ್ನು ಕೊಟ್ಟಿದ್ದೇನೆ. ಅದಕ್ಕಾಗಿ ದಾಖಲೆ ಇದೆ. ನಾನು ವಾದಿಗೆ ಹಣವನ್ನು ಆಸ್ತಿ ಮಾರಿ ಮತ್ತು ನಾಗಭೂಷಣ ಇವರಿಂದ ಪಡೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ.

9) ವಾದಿಗೆ ಹಣವನ್ನು ಕೊಡುವ ಸಮಯದಲ್ಲಿ ಆತ ಮಾಡಿದ ಕೆಲಸದ ವಿವರ ಮತ್ತು ವರದಿಯನ್ನು ಏನಾದರೂ ಪಡೆದು ಕೊಟ್ಟಿದ್ದೀರಾ ಎಂದರೆ, ಕೆಲಸ ಮುಗಿಯುತ್ತಿದೆ ಎಂದು ಹೇಳಿದ ವಿಶ್ವಾಸದಿಂದ ಕೊಟ್ಟಿದ್ದೆ. ವಾದಿ ಮಾಡಿದ ಕೆಲಸದ ಮೌಲ್ಯಮಾಪನವನ್ನು ಇಂಜಿನಿಯರ್ ರವರಿಂದ ಮಾಡಿಸಿದ್ದೆ. ಆ ಮೌಲ್ಯಮಾಪನ ಮಾಡಿದ ಇಂಜಿನಿಯರ್ ಗಣೇಶ್ ಶೆಟ್ಟಿ ಎನ್ನುವವರು. ಅವರು ಕೊಟ್ಟಿದ್ದ ವರದಿ ಇದೆಯಾ ಎಂದರೆ, ಅದು ನಿಶಾನೆ ಡಿ-2 ರ ದಾಖಲೆ. ನಾನು ವಾದಿಗೆ ಹೆಚ್ಚಿಗೆ ಪಾವತಿಸಿರುವ 7,50,000/- ಲಕ್ಷ ಹಣವನ್ನು ಮರಳಿ ಕೇಳದೇ ಇರಲು ಕಾರಣ ಇದೆಯಾ ಎಂದರೆ, ಆ ಹಣವನ್ನು ಆತನನ್ನು ನಂಬಿ ಕೊಟ್ಟಿದ್ದೆ. ವಾದಿಗೆ ನಾನು ಯಾವುದೇ ಹಣವನ್ನು ಹೆಚ್ಚಿಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ.

10) ನನಗೆ ಈಗ ತೋರಿಸಿದ ನಿಶಾನೆ ಡಿ-1ರಲ್ಲಿಯ 3ನೇ ಪುಟದಲ್ಲಿ ಗ್ರೌಂಡ್ ಫ್ಲೋರ್ ವಿವರದಲ್ಲಿ ಬರೆದ ತಾರೀಕು 18-02-2021ರ ಒಟ್ಟು ಹಣ 28 ಲಕ್ಷ ರೂಪಾಯಿಗಳನ್ನು ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಆ ದಿನಾಂಕದಂದು ಕಂಡು ಬರುವ ಸಹಿಗಳು ವಾದಿಯದ್ದು ಅಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-1ರ ಆ ಭಾಗವನ್ನು **ನಿಶಾನೆ ಪಿ-6** ಎಂದು ಗುರುತಿಸಿದೆ. ನಿಶಾನೆ ಡಿ-1ರಲ್ಲಿ ಪಾವತಿಸಿದೇ ಎನ್ನುವ ಹಣ ಕೆಲಸ ನಡೆಯುತ್ತಿದ್ದಾಗ ಕೊಟ್ಟಿದ್ದೇನೆ, ಅದು ಮುಂಗಡವಾಗಿ ಕೊಟ್ಟಿದ್ದು ಅಲ್ಲ. ನಿಶಾನೆ ಡಿ-1ರ, ನಿ.ಪಿ-6ರ ಹಣವನ್ನು ನಾಲ್ಕು ಕಂತುಗಳಲ್ಲಿ ಪಾವತಿಸಿತ್ತು. ನಿಶಾನೆ ಪಿ-6ರಲ್ಲಿಯ ದಿನಾಂಕವನ್ನು ವಾದಿಯೇ ಬರೆದಿದ್ದು. ನಿಪಿ-6ರಲ್ಲಿಯ ದಿನಾಂಕವನ್ನು ಯಾರು ಒಡೆದದ್ದು ಎಂದರೆ, ನಾನು ಒಡೆದದ್ದು ಅಲ್ಲ. ನಿಪಿ-6ರಲ್ಲಿಯ ಹೇಳಿದ ಹಣವನ್ನು ಪಾವತಿಸಿಲ್ಲವಾದ್ದರಿಂದ ಅದನ್ನು ಒಡೆದು ಹಾಕಿದೆ ಎಂದರೆ, ಸಾಕ್ಷಿ ಸುಮ್ಮನಿದ್ದಾರೆ.

11) ಈದಾವಾ ಕಟ್ಟಡದ ಸುಮಾರು 30 ಮೀಟರ್ ಗಳ ಅಂತರದಲ್ಲಿ ನನ್ನ ಅಕ್ಕ ವಾಸವಾಗಿದ್ದಾರೆ. ಅವರಿಗೆ 4 ಜನ ಮಕ್ಕಳು, ಅವರಲ್ಲಿ ಮನೋಜ್ ಸಹ ಒಬ್ಬ. ನನ್ನ ಅಕ್ಕನ ಮಕ್ಕಳೆಲ್ಲಾ ನನ್ನ ಕಟ್ಟಡದ ಕಾಮಗಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ನನ್ನ ಕಟ್ಟಡದ ಹಣಕಾಸಿಗಾಗಿ ಬ್ಯಾಂಕಿನಿಂದ ಸಾಲ ಪಡೆಯಲು ಬೇರೆ ಇಂಜಿನಿಯರ್ ನಿಂದ ಪಡೆದ ವರದಿ, ಇನ್ವಾಯಿಸ್ ಗಳನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ, ಅದನ್ನು ವಾದಿಯೇ ಕೊಟ್ಟಿದ್ದ. ವಾದಿ ಕೊಟ್ಟಿದ್ದ ಸ್ಕೆಚ್ ಮತ್ತು ವರದಿಗಳನ್ನು ನಾನು ಬೇರೆಯೊಬ್ಬ ಇಂಜಿನಿಯರ್ ನಿಂದ ಸಹಿ ಮಾಡಿಸಿ, ಬ್ಯಾಂಕ್ , ಪಂಚಾಯಿತಿ, ಮತ್ತು ಇತರ ಅಧಿಕಾರಿಗಳ ಮುಂದೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪಾಟೀಸವಾಲು ಮಾಡುತ್ತಿರುವ ವಕೀಲರು ಸಾಕ್ಷಿ ಕೊಟ್ಟ ಉತ್ತರಗಳನ್ನು ದಾಖಲಿಸಿಕೊಳ್ಳುವ ಮೊದಲೇ ಇನ್ನೊಂದು ಪ್ರಶ್ನೆಗಳನ್ನು ಕೇಳಿದ್ದರಿಂದ, ಸರಿಯಾದ ಪಾಟೀಸವಾಲಿನ ದಾಖಲೆಯಾಗುತ್ತಿಲ್ಲ)

12) ವಾದಿ ಕೊಟ್ಟಿದ್ದ ಪ್ಲಾನ್, ವರದಿ ಇವುಗಳನ್ನು ನಾನು ಬೇರೆ ಇಂಜಿನಿಯರ್ ನಿಂದ ಸಹಿ ಮಾಡಿಸಿಕೊಟ್ಟಿದ್ದೇನೆ ಎಂದರೆ, ಅವುಗಳನ್ನು ವಾದಿಯೇ ತಂದು ಕೊಟ್ಟಿದ್ದ.

(ಉಳಿದ ಕೇಸುಗಳ ವಿಚಾರಣೆ ಇದ್ದುದರಿಂದ ಹೆಚ್ಚಿ ನ ಪಾಟೀಸವಾಲನ್ನು ನಾಳೆಗೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್ ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ